(SRI VEERENDRA PATIL)

(*b*) The following are the reasons for the delay :—

(i) Formalities to be observed in finalising the Inter State Seniority Lists.

(ii) Complicated nature of work.

(iii) Complications arising as a result of various judicial pronouncements.

Sri SIDDIAH KASIMATH.—May I know how many writ petitions are pending in the High Court ?

† Sri VEERENDRA PATIL.—That information is not with me now.

ಶ್ರೀ ಸಿದ್ದಯ್ಯ ಕಾಶೀಮಠ್.—ಈ ಇಂಟರ್ ಸ್ಟೇಟ್ ಸೀನಿಯಾರಿಟಿ ಫೈನಲೈಸ್ ಆಗಿರದಿದ್ದುದರಿಂದ ಬಹಳ ಮಂದಿಗೆ ತೊಂದರೆಯಾಗಿದೆ. ಅದನ್ನು ತೀವ್ರವಾಗಿ ಫೈನಲೈಸ್ ಮಾಡುವುದಕ್ಕೆ ಯಾವ ತರವ ಕಾರ್ಯಕ್ರಮ ಕೈಕೊಂಡಿದ್ದೀರಿ ?

ಶ್ರೀ ವೀರೇಂದ್ರ ಪಾಟೀರ್.—ಇದರಲ್ಲಿ ಕೆಲವು ಪ್ರೊಸೀಜರ್ ಇದೆ. ನಾವು ಎಷ್ಟು ಪ್ರಯತ್ನ ಮಾಡಿದರೂ ಅದಕ್ಕೆ ಕೆಲವು ಪ್ರೊಸೀಜರ್ ಇರುವುದರಿಂದ ಪ್ರೊಸೀಜರ್ ಮುಗಿಯುವವರೆಗೆ ಫೈನಲೈಸ್ ಮಾಡುವುದಕ್ಕಾಗುವುದಿಲ್ಲ. ಇಷ್ಟು ಮಾತ್ರ ಹೇಳಬಹುದೇನೆಂದರೆ, ಈಗಾಗಲೇ ಬಹಳ ಕೆಲಸವಾಗಿದೆ. ಸ್ವಲ್ಪಮಟ್ಟಿಗೆ ಕೆಲಸ ಉಳಿದಿದೆ. ಈ ವರ್ಷದ ಅಂತ್ಯದೊಳಗೆ ಮುಗಿದುಹೋಗುತ್ತದೆ.

ಶ್ರೀ ಶರಣಗೌಡ ಇನಾಂದಾರ್.—ಅಂತರ ರಾಜ್ಯ ಸೀನಿಯಾರಿಟಿ ಪಟ್ಟಿ ಅಂತಿಮ ತೀರ್ಮಾನವಾಗುವುದಕ್ಕೆ ಮುಂಚಿತವಾಗಿಯೇ ಸಿಕ್ಕಾಪಟ್ಟೆ ಪ್ರೊಮೋಷನ್‌ಗಳನ್ನು ಕೊಡುತ್ತಿದ್ದೀರಿ. ಮುಂದೆ ಇದರ ಪರಿಣಾಮವೇನಾಗುತ್ತದೆಯೋ ಅದನ್ನು ತಡೆಹಿಡಿಯುವುದಕ್ಕೆ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆ ?

ಶ್ರೀ ವೀರೇಂದ್ರ ಪಾಟೀರ್.—ಅಂತರ ರಾಜ್ಯ ಸೀನಿಯಾರಿಟಿ ಪಟ್ಟಿ ಅಂತಿಮ ತೀರ್ಮಾನವಾಗುವುದಕ್ಕೆ ಮುಂಚಿತವಾಗಿ ಸಿಕ್ಕಾಪಟ್ಟೆ ಯಾವ ಪ್ರೊಮೋಷನ್ನನ್ನೂ ನಹ ಕೊಡುವುದಕ್ಕಾಗುವುದಿಲ್ಲ. ಸರ್ಕಾರದಲ್ಲಿ ಈ ಅಂತರ ರಾಜ್ಯ ಸೀನಿಯಾರಿಟಿ ಪಟ್ಟಿಯ ಬಗ್ಗೆ ಪ್ರೊವಿಷನರ್ ಲಸ್ಟ್ ತಯಾರಾಗುತ್ತಿದೆ. ಅದ್ದರಿಂದ ಆ ಅಂತಿಮ ಪಟ್ಟಿ ಬರುವುದಕ್ಕೆ ಮುಂಚಿತವಾಗಿ ಪ್ರೊವಿಷನರ್ ಲಸ್ಟ್ ಪ್ರಕಾರವೇ ಪ್ರೊಮೋಷನ್ಸ್ ಕೊಡಬೇಕಾಗುತ್ತದೆ.

Sanction of Increments to Graduate Teachers working in Primary Schools

28. Sri K. P. NADGOUDA (Mudhol).—

Will the Minister for Education be pleased to state :—

(*a*) the provision under which Graduate Teachers serving in Primary Schools are given four increments ;

(*b*) whether it is the general policy of the Government to implement the scheme of giving four increments to graduate teachers in Primary Schools throughout the state ;

(*c*) if so, why this policy is not followed by all District School Boards in Bombay Karnataka Area except in corporation area ?

A.—Sri K. V. SHANKARA GOWDA (Minister for Education).—

(*a*) As per Government Order No. FD 10 SRP (2) 64 dated the 9th October 1964.

(*b*) Yes.

(*c*) Some of the School Boards and the audit felt a doubt on the applicability of the benefit to the school board teachers. It has since been clarified that the above order is also applicable in the case of Primary School Teachers in the Bombay Karnatak Area.

ಶ್ರೀ ಕೆ. ಪಿ. ನಾಡಗೌಡ.—(ಅ) ಪ್ರಶ್ನೆಗೆ ಉತ್ತರವಾಗಿ 1964ನೇ ಇಸವಿಯ ಸರ್ಕಾರೀ ಆದೇಶದ ಮೇರೆಗೆ ಪದವೀಧರ ಉಪಾಧ್ಯಾಯರಿಗೆ ಆ ಸೌಕರ್ಯ ಇತ್ತು ಎಂಬುದಾಗಿ ಹೇಳಿದೆ. ಅದು ಈಗ 1968ನೇ ಇಸವಿಯಲ್ಲಿ ಸ್ಪಷ್ಟ ಆಯಿತೆಂದು ಹೇಳಿದ್ದೀರಿ. ಈ ನಿಯಮ ಬೊಂಬಾಯಿ ಕರ್ನಾಟಕದಲ್ಲಿ ಈಗ ಜಾರಿಯಾಗುವುದರಿಂದ ಅವರಿಗೆ ಕೊಡುವ ಹೆಚ್ಚುವರಿಗಳನ್ನು ರಿಟ್ರಾಸ್ಪೆಕ್ಟಿವ್ ಎಫೆಕ್ಟಾಗಿ ಕೊಟ್ಟು ಆ ಉಪಾಧ್ಯಾಯರುಗಳಿಗೆ ಅನುಕೂಲ ಮಾಡಿಕೊಡುತ್ತೀರಾ ?

†ಶ್ರೀ ಕೆ. ಎ. ಶಂಕರಗೌಡ.—ಆದಿನ್ನೂ ಪರಿಶೀಲನಬೇಕಾದ ವಿಷಯ.

ಶ್ರೀ ಕೆ. ಪಿ. ನಾಡಗೌಡ.—ಈ ನಿಯಮ ಬೊಂಬಾಯಿ ಕರ್ನಾಟಕಕ್ಕೂ ಅನ್ವಯಿಸುತ್ತದೆನ್ನುವ ಮಾತು 1968ರಲ್ಲಿ ಸ್ಪಷ್ಟವಾಯಿತು. ಅಂದಮೇಲೆ ಈ ಮೂರು ವರ್ಷಗಳ ಅವಧಿಯಲ್ಲಿ ಬರತಕ್ಕ ಲಾಭ ಅಲ್ಲನ ಎಲ್ಲ ಪದವೀಧರ ಉಪಾಧ್ಯಾಯರಿಗೂ ತಟ್ಟುತ್ತದೆಯೇ ?

ಶ್ರೀ ಕೆ. ಎ. ಶಂಕರಗೌಡ.—ಅದನ್ನು ಲೀಗಲ್ಲಾಗಿ ಪರಿಶೀಲನೆ ಮಾಡಬೇಕಾದ ವಿಷಯ.

ಶ್ರೀ ಕೆ. ಎಚ್. ಪಾಟೀಲ್.—ಹಳೆಯ ಮೈಸೂರು ರಾಜ್ಯದಲ್ಲಿ ನಾಲ್ಕು ವಿಧಗಳ ಸೌಲಭ್ಯಗಳಿದ್ದುವು. ಈಗ 4 ಹೆಚ್ಚುವರಿಗಳನ್ನು ಕೊಡುವುದು ಬೊಂಬಾಯಿ ಕರ್ನಾಟಕ ವಿರಿಯಾದವರಿಗೆ ಮಾತ್ರ ಈಗ ಅಪ್ಲಿಕಬಲ್ ಆಗಿದೆ. ಆದರೆ ಉಳಿದ ಉಪಾಧ್ಯಾಯರಿಗೆ ಕೊಡುವ ಸೌಕರ್ಯವಂತೆ ಸರ್ಕಾರಿ ಹೈಸ್ಕೂಲುಗಳಲ್ಲಿ ಶೇಕಡ 25 ರಷ್ಟು ಹೆಡ್‌ಮಾಸ್ಟರ್ ಸ್ಥಾನಗಳನ್ನೂ ಮಿಡಲ್ ಸ್ಕೂಲುಗಳಲ್ಲಿ ಕೆಲಸ ಮಾಡುವವರಿಗೆ ಮಾಸಶಾಗಿಡಿಸುವುದು, ಕೆಲವರನ್ನು ಇನ್‌ಸ್ಪೆಕ್ಟರಾಗಿ ನೇಮಕ ಮಾಡುವುದನ್ನು ಕನ್‌ಸಿಡರ್ ಮಾಡುವುದು ನಿವೃತ್ತಿ ವಯಸ್ಸು—ಇವೆಲ್ಲಾ ಸೌಲತ್ತುಗಳನ್ನು ಅವರಿಗೆ ಕೊಟ್ಟಿಲ್ಲ. ಅದ್ದರಿಂದ ಎರಡೂ ಭಾಗಗಳಲ್ಲಿಯೂ ಒಂದೇ ತರಹವಾಗಿ ಸೌಲಭ್ಯಗಳನ್ನು ಕೊಡುವುದಕ್ಕೆ ಮಂತ್ರಿಗಳಿಗೆ ಇನ್ನೂ ಎಷ್ಟು ಸಮಯ ಬೇಕಾಗುತ್ತದೆ ?

ಶ್ರೀ ಕೆ. ಎ. ಶಂಕರಗೌಡ.—ಈ ನಿಯಮದಿಂದ ಕೆಲವು ಸೌಲತ್ತುಗಳು ಅವರಿಗೆ ಅನ್ವಯವಾಗುತ್ತದೆ. ಒಂದು ವೇಳೆ ಯಾವುದಾದರೂ ಅನ್ವಯವಾಗದಿದ್ದರೆ ಅಂಥಾದ್ದನ್ನು ಆದಷ್ಟು ಜಾಗ್ರತೆ ಅನ್ವಯ ಮಾಡುವುದಕ್ಕೆ ಪ್ರಯತ್ನಮಾಡುತ್ತೇನೆ.

Sri K. P. SANGANAGOUDA.—There are some instances in Gulbarga Division where the Teachers who are working in Primary Schools and who have completed Graduation, have not been given these four increments. For instance, Teachers will have reached the maximum in the grade Rs. 80–150 but they are not allowed to draw the four increments. What is the fate of those Teachers ?

Sri K. V. SHANKARA GOWDA.—If specific instances of such nature are brought to my notice, I will get them examined.

ಶ್ರೀ ಎಂ. ಜಿ. ಬಣಕಾರ್.—1964ರಲ್ಲಿ ಹೊರಡಿಸಿದ್ದ ಸರ್ಕಾರಿ ಆದೇಶವನ್ನು ಈಗ ಅನ್ವಯ ಮಾಡುವುದಕ್ಕೆ ಕಾರಣವೇನು ?

ಶ್ರೀ ಕೆ. ಎ. ಶಂಕರಗೌಡ.—ಪದವೀಧರ ಉಪಾಧ್ಯಾಯರುಗಳು ಪ್ರಾಥಮಿಕ ಶಾಲೆಗಳಲ್ಲಿರುವುದರಿಂದ ಅವರಿಗೆ ಸಂಬಳ ಜಾಸ್ತಿ ಬರಲಿ ಎಂಬ ಉದ್ದೇಶದಿಂದ ನಾಲ್ಕು ವಾರ್ಷಿಕ ಹೆಚ್ಚುವರಿಗಳನ್ನು ಕೊಡುವ ನಿಯಮ ಅವರಿಗೂ ಅನ್ವಯವಾಗಿದೆ.

ಶ್ರೀ ಎಂ. ಡಿ. ಬಣಕಾರ್.—ಪ್ರಾಥಮಿಕ ಶಾಲೆಯಲ್ಲಿ ಕೆಲಸ ಮಾಡುವ ಪದವೀಧರ ಉಪಾಧ್ಯಾಯರಿಗೆ ಎಲ್ಲಾ ಸೌಲತ್ತುಗಳು 1964ನೇ ಇಸವಿಯ ಸರ್ಕಾರದ ಆದೇಶದ ಮೇರೆಗೆ ಕೊಟ್ಟಿರುವ ಹಾಗೆ ಹೊಸ ಮೈಸೂರಿನಲ್ಲಿರತಕ್ಕ ಎಲ್ಲಾ ಪ್ರಾಥಮಿಕ ಶಾಲೆಯ ಎಲ್ಲಾ ಪದವೀಧರ ಉಪಾಧ್ಯಾಯರಿಗೆ ಎಲ್ಲಾ ಸೌಲಭ್ಯಗಳು ದೊರೆಯುತ್ತವೆಯೇ ?

ಶ್ರೀ ಕೆ. ವಿ. ಶಂಕರಗೌಡ.—ಉತ್ತರದಲ್ಲಿ ಅದು ಬಹಳ ಕ್ಲಿಯರಾಗಿ ಕಾಣುತ್ತದೆ. ಅವರಿಗೂ ಅನ್ವಯವಾಗುತ್ತದೆಂದು ಉತ್ತರದಲ್ಲಿಯೇ ಹೇಳಿದೆ.

Sri K. P. SANGANAGOUDA.—Has it come to your notice that this Government Order has not come into force in Hyderabad Karnatak area and the graduate teachers in Primary Schools have not been given this benefit ?

Sri K. V. SHANKARA GOWDA.—It has not come to my knowledge. My information is that it is applicable to the Graduate Teachers in the erstwhile Hyderabad area also.

ಶ್ರೀ ಎಂ. ಎಸ್. ಕೃಷ್ಣನ್.—ಸ್ಯಾಮಿ, ತಮ್ಮ ಆರ್ಡರ್ ಪ್ರಕಾರ 4 ಇನಕ್ರಿಮೆಂಟ್‌ಗಳು ಪ್ರೈಮರಿ ಸ್ಕೂಲುಗಳಲ್ಲಿರತಕ್ಕ ಎಲ್ಲಾ ಪದವೀಧರ ಉಪಾಧ್ಯಾಯರುಗಳಿಗೂ ಸಿಕ್ಕಬೇಕಾಗಿತ್ತು, ಆದರೂ ನಮ್ಮ ಕೆಲವರಿಗೆ ಅದು ಸಿಕ್ಕಿಲ್ಲ. ಅದನ್ನು ತಮ್ಮ ಗಮನಕ್ಕೆ ತಂದರೆ ಅದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ. ವಿ. ಶಂಕರ ಗೌಡ.—ಅದನ್ನು ಸರ್ಕಾರದವರ ಗಮನಕ್ಕೆ ತಂದರೆ ಸರ್ಕಾರದವರು ಅದನ್ನು ವಿಚಾರಣೆ ಮಾಡುತ್ತಾರೆ.

Sri K. H. PATIL.—What was the intention of the Government while issuing circular mentioned in the reply extending all the facilities that were available to the old Mysore to the Bombay Karnatak area teachers?

Sri K. V. SHANKARA GOWDA.—I do not understand it. We want to see that there is uniformity all over the State.

ಶ್ರೀ ಎಸ್. ಭೀಮಣ್ಣ.—ಹೈದರಾಬಾದ್ ಕರ್ನಾಟಕಕ್ಕೆ ಸಂಬಂಧಪಟ್ಟ ಹಾಗೆ ಪ್ರೈಮರಿ ಸ್ಕೂಲಿನಲ್ಲಿ ಕೆಲಸ ಮಾಡತಕ್ಕ ಪದವೀಧರ ಉಪಾಧ್ಯಾಯರು ಅವರ ಇನ್‌ಕ್ರಿಮೆಂಟ್ ವಿಷಯದಲ್ಲಿ ಸರ್ಕಾರಕ್ಕೆ ಕೊಟ್ಟಿರತಕ್ಕ ಮನವಿಗಳು ಎಷ್ಟು ಪೆಂಡಿಂಗ್ ಇವೆ ?

ಶ್ರೀ ಕೆ. ವಿ. ಶಂಕರಗೌಡ.—ಬೇರೆ ಪ್ರಶ್ನೆಯನ್ನು ಕೇಳಿದರೆ ಅದಕ್ಕೆ ಉತ್ತರವನ್ನು ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಬೊಂಬಾಯಿ ಕರ್ನಾಟಕದಲ್ಲಿ ಸ್ಕೂರ್ ಬೋರ್ಡುಗಳು ಇರುವುದರಿಂದ ಪ್ರೈವೇಟ್ ಸಂಸ್ಥೆಗಳೇ ಪ್ರೈಮರಿ ಸ್ಕೂಲುಗಳನ್ನು ನಡೆಸುತ್ತಿದ್ದಾರೆ. ಅದರ ಸಲುವಾಗಿ ಅವರಿಗೆ ಸರ್ಕಾರದವರು ಎಲ್ಲಾ ಸಲವತ್ತುಗಳನ್ನು ಒದಗಿಸಿಕೊಟ್ಟಿದ್ದಾರೆಯೇ? ಅವರಿಗೆ ಈ ಸೌಲತ್ತುಗಳನ್ನು ಕೊಡತಕ್ಕ ಅನೇಕ ಕೇಸುಗಳು ಪೆಂಡಿಗ್ ಇವೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ವಿ. ಶಂಕರೇಗೌಡ.—ಇದು ಬಹಳ ಸ್ಪೀಪಿಂಗ್ ರಿಮಾರ್ಕ್ಸ್ ಎಂದು ಹೇಳದೆ ಗತ್ಯಂತರ ಇಲ್ಲ. ಅವರಿಗೆ ಯಾವ ಡಿಸ್‌ಕ್ರಿಮಿನೇಷನ್ನೂ ಮಾಡಿಲ್ಲ. ಹಳೆಯ ಮೈಸೂರು ಪ್ರದೇಶ ಗಲ್ಲಿರತಕ್ಕ ಸ್ಕೂಲುಗಳಿಗೆ ಏನೇನು ಸಲವತ್ತುಗಳನ್ನು ಕೊಡಲಾಗುತ್ತದೆಯೋ ಅದೇರೀತಿ ಬೊಂಬಾಯಿ ಏರಿಯಾದಲ್ಲಿರತಕ್ಕ ಸ್ಕೂಲುಗಳಲ್ಲಿ ಕೆಲಸಮಾಡತಕ್ಕ ಉಪಾಧ್ಯಾಯರಿಗೂ ಕೊಡ ಲಾಗುತ್ತಿದೆ. ರಿಜ್ಯೆರ್‌ಮೆಂಟ್ ಏಜ್, ಪದವೀಧರ ಉಪಾಧ್ಯಾರಿಗೆ ಕೊಡತಕ್ಕ ಇನ್‌ಕ್ರಿಮೆಂಟ್ ಎಲ್ಲವನ್ನೂ ಹಳೆಯ ಮೈಸೂರು ಪ್ರದೇಶದ ಸ್ಕೂಲುಗಳಲ್ಲಿ ಕೆಲಸ ಮಾಡತಕ್ಕ ಉಪಾಧ್ಯಾಯರಿಗೆ ಕೊಟ್ಟಹಾಗೆಯೇ ಬೊಂಬಾಯಿ ಏರಿಯಾದಲ್ಲಿರತಕ್ಕ ಸ್ಕೂಲುಗಳಲ್ಲಿ ಕೆಲಸಮಾಡತಕ್ಕ ಉಪಾಧ್ಯಾಯ ರಿಗೂ ಕೊಡಲಾಗುತ್ತಿದೆ. ಆದ್ದರಿಂದ ಒಬ್ಬರಿಗೊಬ್ಬರಿಗೆ ಏನೂ ಬೇದ ಭಾವ ಮಾಡಿಲ್ಲ. ಹಳೆಯ ಮೈಸೂರಿನಲ್ಲಿರತಕ್ಕ ಸ್ಕೂಲುಗಳಲ್ಲಿ ಕೆಲಸ ಮಾಡತಕ್ಕ ಉಪಾಧ್ಯಾಯರಿಗೆ ಏನು ಸವಲತ್ತುಗಳು ಸಿಕ್ಕುತ್ತವೆಯೋ ಆ ಎಲ್ಲಾ ಸವಲತ್ತುಗಳು ಅವರಿಗೂ ಸಿಕ್ಕುತ್ತವೆ.

ಶ್ರೀ ಮಹದೇವ್ ಜಿ. ಬಣಕಾರ್.—ಹಳೆಯ ಮೈಸೂರು ಭಾಗದಲ್ಲಿ ಉಪಾಧ್ಯಾಯರು ಟ್ರೈನಿಂಗ್ ಪಡೆಯುವುದಕ್ಕೆ ಬಂದರೆ ಅವರಿಗೆ ಫ್ಯಾಮಿಲೀ ಅಲೋಯನ್ಸ್ 15 ರೂಪಾಯಿಗಳನ್ನು ಕೊಡುತ್ತಿದ್ದಾರೆ. ಆದರೆ ಧಾರವಾಡ ಡಿವಿಜನ್ನಿನ ಉಪಾಧ್ಯಾಯರು ಟ್ರೈನಿಂಗಿಗೆ ಬಂದರೆ ಅವರಿಗೆ ಫ್ಯಾಮಿಲಿ ಅಲೋಯನ್ಸ್ 7 ರೂಪಾಯಿಗಳನ್ನು ಕೊಡುತ್ತಿದ್ದಾರೆ. ಇದು ಡಿಸ್‌ಕ್ರಿಮಿನೇಷನ್ ಹೌದೇ ಅಲ್ಲವೇ ?

ಶ್ರೀ ಕೆ. ಎ. ಶಂಕರಗೌಡ.—ಹಾಗೇನೂ ಇಲ್ಲ ಎಲ್ಲರಿಗೂ ಒಂದೇ ರೇಟು ಅಲೋಯನ್ಸ್ ಕೊಡುತ್ತಿದ್ದಾರೆ.

Construction of a Tank in Hubli Taluk

29. Sri F. S. PATIL (Kalghatgi).—

Will the Chief Minister be pleased to state :—

(*a*) whether it has come to their notice that survey was conducted since several years for constructing a tank near Veerapura village in Hubli Taluk ;

(*b*) the year in which the survey work of the said tank was started for the first time ;

(*c*) the number of times survey in respect of the said tank was conducted till the end of 1967 ;

(*d*) the extent of irrigable land estimated at each time when survey was cenducted (Yearwise figures may please be given) ;

(*e*) whether the survey work of the said tank has been completed and the plan and estimates have been prepared ;

(*f*) the estimated cost that may be incurred for the construction of the said tank :

(*g*) whether the work of the said project would be started during the current year itself ?

A.—Sri VEERENDRA PATIL (Chief Minister).—

(*a*) Yes.

(*b*) During 1964.

(*c*) Only once.

(*d*) The Scheme has not yet been finalised.

(*e*) No.

(*f*) Does not arise in view of above.

(*g*) Does not arise in view of above.

ಶ್ರೀ ಎಫ್. ಎಸ್. ಪಾಟೀಲ್.—ಸ್ವಾಮಿ, ಹುಬ್ಬಳ್ಳಿ ತಾಲ್ಲೂಕು ವೀರಾಪುರ ಗ್ರಾಮದ ಹತ್ತಿರ ಕೆರೆಯನ್ನು ಕಟ್ಟುವುದಕ್ಕಾಗಿ ಸರ್ವೆ ಕೆಲಸ 1964 ನೇ ಇಸವಿಯಲ್ಲಿಯೇ ಪ್ರಾರಂಭವಾಗಿದೆ ಎಂದು ಹೇಳಿದ್ದೀರಿ, ಹಾಗಾದರೆ 1964 ನೇ ಇಸವಿಯಿಂದ 1968 ನೆಯ ಇಸವಿಯವರೆಗೂ ಈ ಯೋಜನೆಯ ಕೆಲಸವನ್ನು ಫೈನಲೈಜ್ ಮಾಡುವುದಕ್ಕೆ ಸರ್ಕಾರಕ್ಕೆ ಆಗಿಲ್ಲವೇ, ಇದಕ್ಕೆ ಕಾರಣವೇನು ?